**ಓ.ಎಸ್. ನಂ. 386/2008**
**ಡಿ.ಡಬ್ಲ್ಯೂ -2**

**(ಇಂದು ದಿನಾಂಕಃ 05-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಬೋಧಿಸಲಾಯಿತು)**

**ವಾಟೀ ಸವಾಲು :ಪ್ರತಿವಾದಿ ನಂ 6 ಪರ ವಕೀಲರಿಂದಃ**

ನನ್ನ ತಂದೆಯ ಹೆಸರು ದುಂಡಪ್ಪ ಈರಪ್ಪಾ ಹಮ್ಮಿನಿ ಆಗಿರುತ್ತದೆ. ನಮ್ಮ ತಂದೆಯವರು ಮೃತ ಪಟ್ಟಿರುತ್ತಾರೆ. ದುಂಡಪ್ಪರವರಿಗೆ ನಾನೇ ವಾರಸುದಾರನಾಗಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿ ನಮ್ಮ ತಂದೆಯವರಿಗೆ ಅವರ ತಂದೆಯಿಂದ ಬಂದಿರುತ್ತದೆ. ನನ್ನ ಅಜ್ಜನ ಹೆಸರು ಈರಪ್ಪ ಆಗಿರುತ್ತದೆ. ಈರಪ್ಪರವರಿಗೆ ದಾವಾ ಆಸ್ತಿ ಅವರ ತಂದೆಯಿಂದ ಬಂದಿದ್ದು ವಾಟ್ನಿಯಲ್ಲಿ ಅವರ ಪಾಲಿಗೆ ಬಂದಿರುತ್ತದೆ ಸದರಿ ದಾವಾ ಆಸ್ತಿ ನಮ್ಮ ತಂದೆಯವರ ಹೆಸರಿಗೆ 1965 ಹೆಸರಿನಲ್ಲಿ ಆಗಿರುತ್ತದೆ. ದಾವಾ ಆಸ್ತಿ ನಮ್ಮ ತಂದೆಯವರ ಹೆಸರಿಗೆ ಆದಾಗಿನಿಂದ ಅವರೇ ಸದರಿ ಆಸ್ತಿಯನ್ನು ವಹಿವಾಟು ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ಸದರಿ ದಾವಾ ಆಸ್ತಿಯಲ್ಲಿ ನಮ್ಮ ತಂದೆಯವರನ್ನು ಹೊರತು ಪಡಿಸಿ ಬೇರೆ ಯಾರಿಗೂ ಸದರಿ ಆಸ್ತಿಯಲ್ಲಿ ಹಕ್ಕು ಅಥವಾ ಪಾಲು ಇರುವುದಿಲ್ಲ.

ದಾವಾ ಆಸ್ತಿಯಾದ ಸರ್ವೆ ನಂ 282/3 ಜಮೀನು 4 ಎಕರೆ 8 ಗುಂಟೆ ನೇದ್ದನ್ನು 6 ನೇ ಪ್ರತಿವಾದಿ ಚೌಕಾಸಿ ಮಾಡಿ ಖರೀದಿಸಿರುತ್ತಾರೆ ಎಂದರೆ ಸರಿ. ಖರೀದಿ ಸಂದರ್ಬದಲ್ಲಿ ನಾನು ದಾವಾ ಆಸ್ತಿಗೆ ಸಂಬಂದಿಸಿದ ಉತಾರಗಳನ್ನು ಹಾಗೂ ದಾಖಲಾತಿಗಳನ್ನು ಅವರಿಗೆ ತೋರಿಸಿರುತ್ತೇನೆ. ದಿಃ 15-11-2011 ರಂದು ನಾನು ದಾವಾ ಆಸ್ತಿಯನ್ನು 6 ನೇ ಪ್ರತಿವಾದಿಯವರಿಗೆ ಖರೀದಿ ಕೊಟ್ಟಿರುತ್ತೇನೆ ಎಂದರೆ ಸರಿ. ಅದರ ಸಂಬಂದ ನನಗೆ ಸದರಿ ಖರೀದಿಯಿಂದ ರೂ. 3,36,000/- ಮುಟ್ಟಿರುತ್ತವೆ ಎಂದರೆ ಸರಿ.

ಈ ಹಂತದಲ್ಲಿ ವಾದಿ ಪರ ವಕೀಲರು ಪ್ರತಿವಾದಿ ನಂ. 6 ರವರು ಸದರಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅವಕಾಶ ನೀಡುವುದಿಲ್ಲ ಎಂದು ತಕರಾರು ಮಾಡಿದ ಮೇರೆಗೆ, ಆ ಕುರಿತು ಪರಿಗಣಿಸಲು ಪಾಟೀ ಸವಾಲು ಮೂಂದುಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೆ ಕೆ ಸರಿ ಇದೆ**

**(Smt. Surya Prabha H.D)**
**Addl. CJ & JMFC, Gokak**